ಬದುಕಿರುವ ಜಾಗಕ್ಕಿಂತ ಗಲೀಜಾಗಿದೆ ಅನಿಸುತ್ತಿತ್ತು.

ಕೊನೆಗೂ ನಮ್ಮಪ್ಪನ ಸಮಾಧಿ ಹುಡಕಿದೆ. ಅಪ್ಪ ಸತ್ತ ಮೇಲೆ ತಿಂಗಳು ತಿಂಗಳೂ ಹೋಗಿ ಎಡೆ ಮಾಡುವ ಕಾರ್ಯ ಮುಗಿದ ಮೇಲೆ ನಾನೂ ಊರು ಬಿಟ್ಟು ಅಪ್ಪನ ಸಮಾಧಿ ನೋಡಲು ಹೋಗಿರಲೇ ಇಲ್ಲ. ಆಗೀಗ ಅಪ್ಪ ಕನಸಲ್ಲಿ ಬರುವುದು ಬಿಟ್ಟರೆ ಅವರ ಮೈ ಇಟ್ಟ ಜಾಗಕ್ಕೆ ಹೋಗಬೇಕು ಅನಿಸಲೇ ಇಲ್ಲ. ಅಪ್ಪ ಸತ್ತ ಹೊಸತರಲ್ಲಿ ಮಾತ್ರ- ಹೋಗಿ ಅವರ ಸಮಾಧಿಯ ಪಕ್ಕ ಕೂತಿರಬೇಕು ಅನಿಸಿ ಹೋಗಿ, ಅಲ್ಲಿನ ಗಬ್ಬು ತಾಳಲಾರದೆ ಬಂದು ಬಿಟ್ಟಿದ್ದೆ. ಇಲ್ಲೇ ಎಲ್ಲೋ ಹೊರಗೆ ಹೋಗಿದ್ದಾರೆ, ಬರುತ್ತಾರೆ ಅಂತಲೋ ನಮ್ಮ ದುಡ್ಡು ಕಾಸು ಮನೆ ಎಲ್ಲಾ ಕೊಟ್ಟುಬಿಟ್ಟರೂ ಪರವಾಗಿಲ್ಲ ಅಪ್ಪ ಬರಲಿ ಅಂತಲೋ, ಇಲ್ಲಾ ಇನ್ನು ನಾನು ಒಬ್ಬನೇ ಅಮ್ಮನ ಜೊತೆ ಜೀವನ ಪೂರ್ತಿ ಇರಬೇಕು ಅಂತಲೋ ಅನಿಸುತ್ತಿತ್ತು. ಎಷ್ಟೋ ಕೋಟಿ ಕೋಟಿ ಜನಕ್ಕೆ ಆದ ಹಾಗೆ ಕ್ರಮೇಣ ಅಪ್ಪ ಮನಸ್ಸಿನಿಂದ ಮರೆಯಾದರೂ ನಾನು ನಿರೀಕ್ಷೆ ಮಾಡದೆ ಇರುವಾಗ ಯಾವಾಗಲೋ ಕಂಡ ಹಾಗೆ ಆಗುತ್ತಿತ್ತು. ಮನಸಿನೊಳಗೆ ಮರವಾಗಿ ಬೆಳೆದ ಜೀವ ಮನಸಿನ ಕಾಡಿನ ಮರಗಳನ್ನೆಲ್ಲ ಕಡಿದು ಉರುಳಿಸುವವರೆಗೆ ಉಳಿದೇ ಇರುತ್ತಲ್ಲವಾ ಅನಿಸುತಿತ್ತು.

* * *

ಇದು ಸ್ಮಶಾನವಲ್ಲ. ಪಾರ್ಕು. ಏನಿಲ್ಲ ಅಂದರೂ ಇಪ್ಪತ್ತು ಮೂವತ್ತು ಎಕರೆಗಿಂತ ದೊಡ್ಡದು ಇರಬಹುದು. ಎಷ್ಟು ನೀಟಾದ ಟಾರು ರಸ್ತೆ. ಎಷ್ಟು ಹಸಿರು ಹುಲ್ಲು ಕಣ್ಣು ಹಾಯುವವರೆಗೂ! ಈ ಮಣ್ಣು ಬಿಟ್ಟು ಹೋದವರೆಲ್ಲ ಎಷ್ಟು ನೀಟಾಗಿ ಈಗ ತಾನೇ ಸ್ನಾನ ಮಾಡಿ ಡ್ರೆಸ್ ಮಾಡಿಕೊಂಡು ಬಂದು ಮಲಗಿ ಹಾಗೇ ಕಲ್ಲಾದ ಹಾಗೆ ಕಾಣುತಿದ್ದಾರೆ. ಎಷ್ಟೊಂದು ಮರ, ಮರದ ನೆರಳು. ಇಲ್ಲಿ ಸಮಾಧಿಗಳಿವೆ ಅನ್ನುವುದು ಬಿಟ್ಟರೆ ಮಕ್ಕಳು ಆಟ ಆಡುವ ಉದ್ಯಾನದ ಹಾಗಿದೆ.

ಇಂಡಿಯಾದವರು, ಅದರಲ್ಲಿ ಸಿಖ್, ಮುಸ್ಲಿಮ್, ಹಿಂದೂ ಎಲ್ಲರ ಸಮಾಧಿಗಳೂ ಇವೆ. ಒಂದೊಂದು ಗುಂಪಲ್ಲೂ ಒಂದಷ್ಟು. ಬಲು ಬೇಗ ಲೋಕ ಬಿಟ್ಟು ಹೋದ ಮಕ್ಕಳ ಮೂಲೆಯಲ್ಲಿ ನೆನಪಿನ ಕಲ್ಲುಗಳ ಮೇಲೆ ಸುಂದರ ಕಾವ್ಯದಂಥ ಮಾತು, ಅಪ್ಪ ಅಮ್ಮಂದಿರು ಬಂದು ಇಟ್ಟು ಹೋಗಿರುವ ಬೊಂಬೆ, ಮಗುವಿಗೆ ಇಷ್ಟವಾಗುತ್ತಿದ್ದ ಕಾರ್ಟೂನು—ಮಗು ಎದ್ದರೆ ಆಡುವುದಕ್ಕೆ ಕೈಗೆ ಸಿಗುವ ಹಾಗೆ. ಈಜಿಪ್ಟಿನ ರಾಜರದೇನು ಮಹಾ! ಇಷ್ಟು ಸಾವಿರ ವರ್ಷವಾದ ಮೇಲೂ ಮನುಷ್ಯನ ಮನಸು ಬದಲಾಗಿಲ್ಲ. ಮಗುವಿಗೆ ಇಷ್ಟವಾಗಿರಬಹುದಾದ ಮೊಲ, ನಾಯಿಮರಿಗಳನ್ನು ಹೂಳಿಲ್ಲ, ಬೊಂಬೆ ಇಟ್ಟಿದ್ದಾರೆ. ಸೈನಿಕ, ವ್ಯಾಪಾರಿ, ಅನ್ಯ ದೇಶದವರು, ಹಲವು ಧರ್ಮಗಳವರು ತಮ್ಮ ತಮ್ಮದೇ ಗುಂಪುಗಳಲ್ಲಿ ನೆಲದ ಮರೆಯಲ್ಲಿರುವುದನ್ನು ಸೂಚಿಸುತ್ತಿತ್ತು ಅವರ ನೆನಪಿನ ಕಲ್ಲು ಬರಹಗಳ ಓದು. ಬದುಕಿರುವವರ ವ್ಯತ್ಯಾಸಗಳೆಲ್ಲ ಸತ್ತವರಿಗೂ ವರ್ಗಾವಣೆಯಾಗಿದೆ. ಅಲ್ಲಲ್ಲಿ ಮರಗಳ ನೆರಳಿನಲ್ಲಿ ಅಷ್ಟಷ್ಟು ಜನರ ಸಮಾಧಿ. ರಸ್ತೆಯ ಪಕ್ಕದಲ್ಲಿ, ಸಮಾಧಿಗಳ ಹತ್ತಿರ ಕೂರಲು ಸ್ವಚ್ಛವಾದ, ಸರಳವಾದ ಬೆಂಚು. ಅಲ್ಲಲ್ಲಿ ಇಬ್ಬರು, ಮೂವರು, ಒಂದೆಡೆಯಲ್ಲಿ ಐದಾರು ಜನ ಅವರವರ ಪ್ರಿಯರಾದವರ ಸಮಾಧಿಗಳ ಹತ್ತಿರ ಹೂವಿಟ್ಟು ಹೋಗುವುದು, ಮೌನವಾಗಿ ನಿಂತಿರುಗುವುದು, ಕೂತು ದಿಟ್ಟಿಸುವುದು ಕಂಡಿತು. ಹೊರಕ್ಕೆ ಬರುವಾಗ ಮುಖ್ಯ ದ್ವಾರದ ಹತ್ತಿರದಲ್ಲೇ ಇತ್ತು-ಮರಣಾನಂತರದ ವ್ಯವಹಾರ ನೋಡಿಕೊಳ್ಳುವ ಕಂಪನಿ ಕಟ್ಟಿಕೊಂಡಿದ್ದ ಮನೆ ಅನಿಸುವಂಥ ಕಟ್ಟಡ.

ಕಟ್ಟಡದ ಮುಂದೊಂದು ಮಾಮೂಲು ಬೋರ್ಡು. ನೆನಪಿಗೆ ಅರ್ಪಿಸಲು ಹೂ ಗುಚ್ಛ ಒಳಗೆ ದೊರೆಯುತ್ತವೆ, ಸಹಾನುಭೂತಿಪೂರ್ವಕವಾಗಿ ಸ್ಮರಣಿಕೆ ಸ್ಥಾಪಿಸಲು... ಅಂತ್ಯ ಸಂಸ್ಕಾರ ನಡೆಸಲು... ಇತ್ಯಾದಿ ಸಹಕಾರಕ್ಕಾಗಿ ದಯವಿಟ್ಟು ಒಳಗೆ ಬನ್ನಿ' ಅನ್ನುವ, ವ್ಯಾಪಾರ ಅನ್ನಿಸದಂಥ ವ್ಯಾಪಾರೀ ಜಾಹೀರಾತು ಬರಹ ಇತ್ತು.

ವ್ಯಾಪಾರ ಅಂದಾಗ ಇನ್ನೊಂದು ಮಾತು ಹೇಳಲೇಬೇಕು. ಸೋಲಿಹಲ್ ಹತ್ತಿರದ ಈ ಸ್ಮಶಾನ ಸುಮಾರು ನೂರ ಐವತ್ತು ವರ್ಷ ಯಾವುದೋ ಕುಟುಂಬದ ಖಾಸಗಿ ಆಸ್ತಿಯಾಗಿತ್ತಂತೆ. ಅಂತ್ಯಸಂಸ್ಕಾರದ ವ್ಯವಹಾರದಿಂದ ಬಹಳ ಲಾಭವಾಯಿತಂತೆ, ಆಮೇಲೆ ಯಾವಾಗಲೋ ಮುನಿಸಿಪಾಲಿಟಿಗೆ ಸೇರಿತಂತೆ.

ಜೀವಂತವಾದವರು ಯಾರೂ ಸುಳಿಯದೆ ಇರುವ ಹೊತ್ತಿನಲ್ಲಿ ಇಲ್ಲಿ ನೆಲದೊಳಗಿರುವ ಆತ್ಮಗಳು ಎದ್ದು ಬಂದರೆ ಅವು ಬದುಕಿದ್ದಾಗ ಇದ್ದಂಥದೇ ನೀಟಾದ ಪರಿಸರ ಅವಕ್ಕೆ ಸಿಗಬೇಕು ಹಾಗಿತ್ತು. ಗಂಭೀರ, ಸ್ವಚ್ಛ, ಸರಳ, ನೆಮ್ಮದಿಯ ತಾಣ. ಇದನ್ನು ಸತ್ತವರಿಗೂ ಬದುಕಿದವರಿಗೆ ಸಿಗುವಂಥ ಸೌಕರ್ಯ ಸಿಗುವ ಹಾಗೆ